ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಬರಲಿ. ಅದರ ಬಗ್ಗೆ ಕೆಲವು ಕಾಲ್ ಅಟೆನ್‌ಷನ್ ನೋಟೀಸ್‌ಗಳೂ ಕೂಡ ಬಂದಿದೆ. ಮುಖ್ಯ ಮಂತ್ರಿಗಳು ಬಂದಮೇಲೆ ಅವರೊಡನೆ ಮಾತನಾಡಿ ಅದನ್ನು ಅಜೆಂಡಾದಲ್ಲಿ ಸೇರಿಸುತ್ತೇನೆ.

(*ii*) *re*:—Strike at the HMT factory

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೂಸ್ಥಾನ್ ಮೆಷನ್ ಟೂರ್ಸ್ ಫ್ಯಾಕ್ಟರಿಯಲ್ಲಿ ಸ್ಟ್ರೈಕ್ ನಡೆದಿದೆ; ಇದು ಬಹಳ ಗಹನವಾದ ವಿಷಯ ಇದರ ಬಗ್ಗೆ ಕೂಡ ನಾನು ರೂಲ್ 312ರ ಪ್ರಕಾರ ತಮಗೆ ಒಂದು ನೋಟ್ ಕಳುಹಿಸಿದ್ದೇನೆ,

ಅಧ್ಯಕ್ಷರು.—ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅಲ್ಲಿಂದ ಅದಕ್ಕೆ ಉತ್ತರ ಬಂದ ಮೇಲೆ ನೋಡೋಣ.

(*iii*) *re*:—The affairs of the PUC Examination

ಶ್ರೀ ಟಿ. ಆರ್. ಶಾಮಣ್ಣ.—ನಾನು ಪಿ. ಯು. ಸಿ. ಎಗ್ಜಾಮಿನೇಷನ್ ಬಗ್ಗೆ ಒಂದು ನೋಟೀಸ್ ತಮಗೆ ಕಳುಹಿಸಿದ್ದೇನೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಈ ಬಗ್ಗೆ ಸರ್ಕಾರದವರು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ —ಇದರಿಂದ ಲಕ್ಷಾಂತರ ರೂಪಾಯಿ ದಂಡ ಆಯಿತು. 80 ಸಾವಿರ ವಿದ್ಯಾರ್ಥಿಗಳಿಗೆ ತೊಂದರೆಯಾಯಿತು. ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು.—ವಿದ್ಯಾಖಾತೆಯ ಮಂತ್ರಿಗಳು ವಿಧಾನಪರಿಷತ್ತಿಗೆ ಹೋಗಿದ್ದಾರೆ. ಅವರು ಅಲ್ಲಿಂದ ಬಂದ ಮೇಲೆ ನೋಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಟಿ.ಆರ್. ಶಾಮಣ್ಣನವರು ಹೇಳಿದಂತಹ ಪ್ರಿಯೂನಿವರ್ಸಿಟಿ ಎಗ್ಜಾಮಿನೇಷನ್ ಬಗ್ಗೆ ನಾನೂ ಕೂಡ ಇವೊತ್ತು 11 ಗಂಟೆಯ ಸಮಯದಲ್ಲಿಯೇ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಈ ಬಗ್ಗೆ ಸರ್ಕಾರದವರು ಸಿ ಒ. ಡಿ. ಅವರಿಂದ ವಿಚಾರಣೆ ಮಾಡಿಸುತ್ತೇವೆ ಎಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎಂದು ಇವೊತ್ತು ಪತ್ರಿಕೆಯಲ್ಲಿ ಕೂಡ ಬಂದಿದೆ. ಇವೊತ್ತು ಈ ಒಂದು ಪಿ. ಯು, ಸಿ ಪರೀಕ್ಷೆಯ ವಿಷಯ ಏನಿದೆ ಇದು ಲಕ್ಷಾಂತರ ಮಕ್ಕಳ ಭವಿತವ್ಯದ ಪ್ರಶ್ನೆ. ಇದರಿಂದ ಮಕ್ಕಳ ಮನಸ್ಸಿಗೆ ಎಷ್ಟು ಆಘಾತ ಉಂಟಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಸರ್ಕಾರ ಎಷ್ಟು ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದೆ ಎಂಬುದು ತಮಗೆ ಗೊತ್ತಿದೆ. ದಿವಂಗತ ರಾಲ್‌ಬಹದ್ದೂರ್ ಶಾಸ್ತ್ರಿಗಳು ರೈಲ್ವೆ ಮಂತ್ರಿಗಳಾಗಿದ್ದಾಗ ಒಂದು ಘಟನೆನಡೆದಾಗ ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟರು ಇವೊತ್ತು ವಿಶ್ವವಿದ್ಯಾನಿಲಯ ಶಾಖೆಯ ಮಂತ್ರಿಗಳು ಪಿ. ಯು. ಸಿ, ಪರೀಕ್ಷೆಯ ಸಂಬಂಧದಲ್ಲಿ ನಡೆದಂತಹ ಕೃತ್ಯದ ಬಗ್ಗೆ ಇವರು ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಇವೊತ್ತು ಅವರಿಗೆ ಒಂದು ಮಾರರ್ ಫಿಯರ್ ಇದ್ದ ಪಕ್ಷದಲ್ಲಿ ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಆದ್ದರಿಂದ ಮಾನ್ಯ ಅಧ್ಯಕ್ಷರು ಈ ಕೂಡಲೇ ಮಾನ್ಯ ವಿಶ್ವವಿದ್ಯಾನಿಲಯ ಶಾಖೆಯ ಮಂತ್ರಿಗಳನ್ನು ಈ ಸಭೆಗೆ ಕರೆಸಬೇಕು.

ಅಧ್ಯಕ್ಷರು.—ಅವರು ವಿಧಾನಪರಿಷತ್ತಿಗೆ ಹೋಗಿದ್ದಾರೆ. ಆ ಮೇಲೆ ಇಲ್ಲಿಗೆ ಒಂದು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ

ಶ್ರೀ ಸಿ. ಬೈರೇಗೌಡ.—ಈ ಬಗ್ಗೆ ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ.

ಅಧ್ಯಕ್ಷರು.—ಮಂತ್ರಿಗಳು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ನಾನು ಈ ಗಾಗಲೇ ಹೇಳಿದ್ದೇನೆ.

(iv) *re*:—Enquiry about alleged excesses upon Lawrence and Snehalata